REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 20 । ಆಗಸ್ಟ್ 23, 2023 । ಬುಧವಾರ । ಪುಟಗಳು : 8 । ಬೆಲೆ : 2/-

# ರಾಜ್ಯ ಮಟ್ಟದ ಎಲ್ಲಾ ಸಹಕಾರ ಶೃಂಗ ಸಂಸ್ಥೆಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆ




**ಬೆಂಗಳೂರು :** ದಿನಾಂಕ : 18.08.2023ರಂದು ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಎಲ್ಲಾ ಸಹಕಾರ ಶೃಂಗ ಸಂಸ್ಥೆಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಯು ಹೋಟೆಲ್ ರ್‍ಯಾಡಿಸನ್ ಬ್ಲ್ಯೂ ರಲ್ಲಿ ಜರುಗಿತು.

ಈ ಸಭೆಯಲ್ಲಿ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರು ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯಮಟ್ಟದ ಅಧ್ಯಕ್ಷರುಗಳ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆ ಏರ್ಪಡಿಸಿ ಕಾರ್ಯಚಟುವಟಿಕೆ ಮತ್ತು ಸಮಸ್ಯೆಗಳ ಬಗ್ಗೆ ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಸಮಾಲೋಚಿಸುತ್ತಿರುವುದು ಇದು ಪ್ರಪ್ರಥಮವಾಗಿರುತ್ತದೆ. ಎಲ್ಲಾ ರಾಜ್ಯಮಟ್ಟದ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಒಬ್ಬೊಬ್ಬರಾಗಿ ತಮ್ಮ ಅಭಿಪ್ರಾಯವನ್ನು ಸಭೆಗೆ ವ್ಯಕ್ತಪಡಿಸಬೇಕೆಂದು ಸೂಚಿಸಿದರು.

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು ಹಾಗೂ ಕಾನೂನು, ನ್ಯಾಯ, ಸಂಸದೀಯ ವ್ಯವಹಾರ, ಶಾಸನ ರಚನೆ, ಮಾನವ ಹಕ್ಕುಗಳು ಹಾಗೂ ಪ್ರವಾಸೋದ್ಯಮ ಸಚಿವರೂ ಆದ ಶ್ರೀ ಎಚ್.ಕೆ. ಪಾಟೀಲರು ಮಾತನಾಡಿ ಮಾನ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡರು ನನಗೆ ಕರೆಮಾಡಿ ರಾಜ್ಯಮಟ್ಟದ ಅಧ್ಯಕ್ಷರುಗಳ ಸಭೆಗೆ ತಾವು ಬರಬೇಕೆಂದು ಕೇಳಿಕೊಂಡಾಗ ಸಹಕಾರ ವಿಷಯಗಳನ್ನು ಚರ್ಚಿಸುವ ಉತ್ತಮ ವೇದಿಕೆ ರಚಿಸಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ತಿಳಿಸಿ. ನಮ್ಮ ಸಹಕಾರಿ ಕ್ಷೇತ್ರ ಇನ್ನು ಎತ್ತರಕ್ಕೆ ಬೆಳೆಯಬೇಕಾದರೆ ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ನವರ ಅಧಿಕಾರದಲ್ಲಿ ಎಲ್ಲಾ ವಲಯದ ಸಹಕಾರ ಸಂಘ ಮತ್ತು ಮಹಾಮಂಡಳಗಳು ಅವರಿಗೆ ಸಹಕರಿಸಿದರೆ ಉತ್ತಮ ಮಾರ್ಗೋಪಾಯಗಳನ್ನು ಕಂಡುಕೊಂಡು ನಮ್ಮ ಸಹಕಾರಿ ಕ್ಷೇತ್ರವನ್ನು ಇನ್ನು ಹೆಚ್ಚಿನ ಪ್ರಗತಿ ಸಾಧಿಸಲು ಶ್ರಮಿಸುತ್ತಾರೆ ಎಂದರು.

ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ನನಗೆ ಸಹಕಾರ ಕ್ಷೇತ್ರವೆಂದರೆ ಮೊದಲಿನಿಂದಲೂ ಬಹಳ ಆಸಕ್ತಿ. ಆದ್ದರಿಂದಲೇ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಸಹಕಾರ ಸಚಿವನಾಗಿ ಅಧಿಕಾರ ವಹಿಸಿಕೊಂಡಿರುತ್ತೇನೆ. ತಮ್ಮೆಲ್ಲರ ಸಹಕಾರದಿಂದ ಈ ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ನನ್ನ ಅಭಿಲಾಷೆಯಾಗಿರುತ್ತದೆ. ತಾವು ಈ ಸಭೆಗೆ ಆಗಮಿಸಿ ತಮ್ಮ ತಮ್ಮ ಕ್ಷೇತ್ರದ ಬೆಳವಣಿಗೆ ಮತ್ತು ಬೇಡಿಕೆಗಳನ್ನು ವ್ಯಕ್ತಪಡಿಸಿರುತ್ತೀರಿ. ಇವುಗಳ ಬಗ್ಗೆ ನಾನು ಸಹಕಾರ ಇಲಾಖೆಯ ಕಾರ್ಯದರ್ಶಿಯವರ ಜೊತೆ ಸುದೀರ್ಘವಾಗಿ

3ನೇ ಪುಟಕ್ಕೆ...

## ದಿನಾಂಕ : 20.09.2023ರಂದು ಮಹಾಮಂಡಳದ 58ನೇ ವಾರ್ಷಿಕ ಮಹಾಸಭೆ

**ಬೆಂಗಳೂರು :** ಮಹಾಮಂಡಳದ 2022-23ನೇ ಸಾಲಿನ 58ನೇ ವಾರ್ಷಿಕ ಮಹಾಸಭೆಯನ್ನು 20ನೇ ಸೆಪ್ಟೆಂಬರ್ 2023ರ ಬುಧವಾರ ಮಧ್ಯಾಹ್ನ 11.00 ಗಂಟೆಗೆ ಮಹಾಮಂಡಳದ ಕೆ.ಎಚ್.ಪಾಟೀಲ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸಭೆಗೆ ಮಹಾಮಂಡಳದ ಅರ್ಹ ಸದಸ್ಯ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಬೇಕಾಗಿ ವಿನಂತಿ. ಒಂದು ಸದಸ್ಯ ಬ್ಯಾಂಕಿನಿಂದ ಒಬ್ಬ ಪ್ರತಿನಿಧಿಗೆ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

2 ಠೇವಣಿ ಹುಡುಕಿ, ಹಿಂಪಡೆಯಲು ಆರ್‌ಬಿಐ ಪೋರ್ಟಲ್
4 ವೀರಶೈವ ಸಹಕಾರಿ ಬ್ಯಾಂಕ್ ಲಿ., ಬೆಂಗಳೂರು : 48ನೇ ವಾರ್ಷಿಕ ಸರ್ವಸದಸ್ಯರ ಸಭೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ



## ಸಂಪಾದಕೀಯ

## ಅತ್ಮೀಯ ಸಹಕಾರಿಗಳೇ...

# ನಮ್ಮ ಗ್ರಾಮಗಳು ತ್ಯಾಜ್ಯ ಮುಕ್ತ ಮಾತ್ರವಲ್ಲ, ವ್ಯಾಜ್ಯ ಮುಕ್ತವೂ ಆಗಬೇಕಿದೆ

ಈ ವಾರ ನನಗೆ ಪ್ರಿಯವಾದ ಗ್ರಾಮ ಪಂಚಾಯತಿ ವಿಷಯವಾಗಿ ಕೆಲ ಸಂಗತಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳ ಬಯಸುತ್ತೇನೆ. ಮುಖ್ಯವಾಗಿ, ಗ್ರಾಮಗಳೇ ನಮ್ಮ ದೇಶದ ಮುಖ್ಯ ಜೀವನಾಡಿಯಾಗಿವೆ. ಅಲ್ಲಿ ಬೆಳೆಯುವ, ಉತ್ಪಾದಿಸುವ ಬಹುತೇಕ ವಸ್ತುಗಳೇ ನಗರ ಜನರ ಅಗತ್ಯಗಳನ್ನು ಪೂರೈಸುತ್ತದೆ. ದೇಶದ ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ಗ್ರಾಮೀಣ ಜನ ಹರಿಸುವ ಬೆವರಿನಿಂದ ಎಂದು ನಾನು ಹೇಳಬಯಸುತ್ತೇನೆ.

ಇದನ್ನ ಅರಿತಿದ್ದ ನಮ್ಮ ಪ್ರಥಮ ಪ್ರಧಾನಮಂತ್ರಿ ಪಂಡಿತ್ ನೆಹರೂ ಅವರು, ನಮ್ಮ ದೇಶದ ಪ್ರತಿ ಗ್ರಾಮಕ್ಕೂ ಒಂದು ಶಾಲೆ, ಪಂಚಾಯಿತಿ ಹಾಗೂ ಸಹಕಾರ ಸಂಘ ಇದ್ದಲಿ, ಗ್ರಾಮದ ಅಭಿವೃದ್ಧಿಯಾಗಲಿದೆ. ಆ ಮೂಲಕ ದೇಶದ ಅಭಿವೃದ್ಧಿಯೂ ಸಾಧ್ಯವಾಗಲಿದೆ ಎಂದು ಬಹು ಹಿಂದೆಯೇ ಹೇಳಿದ್ದು ಇಲ್ಲಿ ನೆನಪು ಮಾಡಲು ಬಯಸುತ್ತೇನೆ.

ಗ್ರಾಮ ಪಂಚಾಯತಿಯ ಆಡಳಿತದ ಮುಖ್ಯ ಉದ್ದೇಶ ಶಿಕ್ಷಣ, ಆರೋಗ್ಯ, ನೀರು, ಕೃಷಿ ಮತ್ತು ನೈರ್ಮಲ್ಯ ಹೀಗೆ ಮೂಲಭೂತ ಸೌಲಭ್ಯಗಳಂತಹ ಸೇವೆಗಳನ್ನು ಒದಗಿಸುವುದಾಗಿತ್ತು. ಜೊತೆಗೆ ಗ್ರಾಮದ ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುವುದು ಅದರ ಮುಖ್ಯ ಗುರಿಯಾಗಿತ್ತು. ನೋಡಿ, ಗ್ರಾಮ ಪಂಚಾಯತಿಯ ಪರಿಕಲ್ಪನೆಯು ನಮ್ಮಲ್ಲಿ ರಾಜ-ಮಹಾರಾಜರ ಕಾಲದಿಂದಲೂ ಇದ್ದ ಸಂಗತಿ ಹಳೆಯ ದಾಖಲೆಗಳಲ್ಲಿದೆ. ಗ್ರಾಮ ಪಂಚಾಯತಿಯ ಸ್ಥಳೀಯವಾಗಿ ಗ್ರಾಮೀಣರೇ ತಮ್ಮನ್ನು ಆಳುವ ಸಲುವಾಗಿ ಹತ್ತು ಸಮಸ್ತರನ್ನು ಆಯ್ಕೆ ಮಾಡಿಕೊಂಡು, ಸ್ಥಳೀಯ ಸಮಸ್ಯೆಗಳ, ವ್ಯಾಜ್ಯಗಳನ್ನು ಎಲ್ಲರಿಗೂ ಒಪ್ಪಿತವಾಗುವ ರೀತಿಯಲ್ಲಿ, ನ್ಯಾಯ ಸಮ್ಮತವಾಗಿ ಪರಿಹರಿಸುತ್ತಿದ್ದವು. ಈ ಹಿಂದೆ ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವನಾಗಿದ್ದಾಗ, ನಮ್ಮ ರಾಜ್ಯದ ಗ್ರಾಮಗಳನ್ನು ಬಯಲು ಶೌಚ ಮುಕ್ತ, ತ್ಯಾಜ್ಯ ಮುಕ್ತಗೊಳಿಸುವ ಕಾರ್ಯವನ್ನು ತುಂಬ ಯಶಸ್ವಿಯಾಗಿ ಜಾರಿಗೊಳಿಸಿದ್ದಕ್ಕಾಗಿ ರಾಷ್ಟ್ರ ಮಟ್ಟದ ಪ್ರಶಂಸೆ, ಪ್ರಶಸ್ತಿ, ಅಭಿನಂದನೆಗಳು ಹರಿದು ಬಂದಿದ್ದನ್ನು ನೀವೆಲ್ಲರೂ ಬಲ್ಲಿರಿ.

ನನ್ನ ದೃಷ್ಟಿಯಲ್ಲಿ, ಗ್ರಾಮಗಳು ಇಷ್ಟನ್ನು ನಿರ್ವಹಿಸಿದರೆ ಸಾಲದು. ನಮ್ಮ ಗ್ರಾಮಗಳು ತ್ಯಾಜ್ಯ ಮುಕ್ತವಲ್ಲ, ವ್ಯಾಜ್ಯ ಮುಕ್ತವೂ ಆಗಬೇಕಿದೆ. ಇದಕ್ಕಾಗಿ ರಾಜ್ಯದಲ್ಲಿ ಗ್ರಾಮ ನ್ಯಾಯಾಲಯಗಳನ್ನು ಜಾರಿಗೆ ತರುವ ಚಿಂತನೆ ನನ್ನದಾಗಿದೆ. ಕಾರಣವಿಷ್ಟೆ; ಪ್ರಸ್ತುತ ಗ್ರಾಮೀಣರಿಗೆ ನ್ಯಾಯವೆನ್ನುವುದು ವೆಚ್ಚದಾಯಕ, ಬಹು ಕಾಲ ಎಳೆಯುವ ಕಾರ್ಯವಾಗಿದೆ. ಇದರಿಂದಾಗಿ, ಜನ ನ್ಯಾಯ ವ್ಯವಸ್ಥೆಯ ಮೇಲೆ ವಿಶ್ವಾಸವನ್ನೇ ಕಳೆದುಕೊಳ್ಳುವಂತಾಗಿದೆ. ನ್ಯಾಯಾಲಯ ಅನ್ನುವುದು, ನ್ಯಾಯಾಧೀಶರು, ವಕೀಲರು ಎಂದಾಗಿದ್ದು, ಕಕ್ಷಿದಾರ ಲೆಕ್ಕಕ್ಕೇ ಇಲ್ಲದಂತಾಗಿದ್ದಾನೆ.

ಈ ಹಿನ್ನೆಲೆಯಲ್ಲಿ, ಗ್ರಾಮೀಣರಿಗೆ ಶೀಘ್ರ ನ್ಯಾಯ ನೀಡುವುದಕ್ಕಾಗಿ ಸಿವಿಲ್ ಪ್ರೊಸಿಜರ್ ಕಾಯ್ದೆಗೆ ತಿದ್ದಪಡಿ ಮಾಡಿದ್ದು, ವಿಧಾನ ಮಂಡಳದಲ್ಲಿ ಒಪ್ಪಿಗೆ ಪಡೆದು ರಾಷ್ಟ್ರಪತಿ ಅವರ ಅಂಕಿತಕ್ಕೆ ಕಳುಹಿಸಲಾಗಿದೆ. ಈ ಕಾಯ್ದೆ ಜಾರಿಗೊಂಡಲ್ಲಿ, ಕೇವಲ 3 ಬಾರಿ ಮಾತ್ರ ವಿಚಾರಣೆಯನ್ನು ಮುಂದೂಡುವುದಕ್ಕೆ ಅವಕಾಶವಿದ್ದು, ಆರು ತಿಂಗಳಲ್ಲಿ ವ್ಯಾಜ್ಯ ಇತ್ಯರ್ಥವಾಗಬೇಕಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ನಮ್ಮ ಗ್ರಾಮಗಳು ತ್ಯಾಜ್ಯ ಮುಕ್ತ ಮಾತ್ರವಲ್ಲ, ವ್ಯಾಜ್ಯ ಮುಕ್ತವೂ ಆಗಲಿವೆ ಎನ್ನುವ ವಿಶ್ವಾಸ ನನ್ನದು.

▶▶ ಎಚ್.ಕೆ. ಪಾಟೀಲ್

# ಠೇವಣಿ ಹುಡುಕಿ, ಹಿಂಪಡೆಯಲು ಆರ್‌ಬಿಐ ಪೋರ್ಟಲ್

**ಮುಂಬೈ** : ಬ್ಯಾಂಕುಗಳಲ್ಲಿ ವರ್ಷಗಳಿಂದ ಉಳಿದು ಕೊಂಡಿರುವ ಠೇವಣಿಗಳನ್ನು ಹುಡುಕಿ, ವಾಪಸ್ ಪಡೆದುಕೊಳ್ಳಲು ನೆರವು ನೀಡುವ ಕೇಂದ್ರೀಕೃತ ಪೋರ್ಟಲ್‌ಗೆ (ಯುಡಿಜಿಎಎಂ) ರಿಸರ್ವ್ ಬ್ಯಾಂಕ್ ಚಾಲನೆ ನೀಡಿದೆ.

ಬೇರೆ ಬೇರೆ ಬ್ಯಾಂಕುಗಳಲ್ಲಿ ಇರುವ, ಯಾರೂ ಕೇಳದೆ ಉಳಿದುಕೊಂಡಿರುವ ಠೇವಣಿಗಳನ್ನು ಶೋಧಿಸಲು ಸಾರ್ವಜನಿಕರಿಗೆ ಇದು ನೆರವಾಗುತ್ತದೆ. ಈ ಪೋರ್ಟಲ್‌ಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಚಾಲನೆ ನೀಡಿದ್ದಾರೆ. ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಪಂಜಾಬ್ ನ್ಯಾಷನಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಧನಲಕ್ಷ್ಮೀ ಬ್ಯಾಂಕ್, ಸೌತ್ ಇಂಡಿಯನ್ ಬ್ಯಾಂಕ್, ಡಿಬಿಎಸ್ ಬ್ಯಾಂಕ್ ಮತ್ತು ಸಿಟಿ ಬ್ಯಾಂಕ್‌ನಲ್ಲಿ ಈ ರೀತಿ ಇರುವ ಠೇವಣಿಗಳನ್ನು ಈಗ ಹುಡುಕಬಹುದು. ಇತರ ಬ್ಯಾಂಕುಗಳಲ್ಲಿನ ಠೇವಣಿಗಳನ್ನು ಹುಡುಕುವ ಸೌಲಭ್ಯವನ್ನು ಅಕ್ಟೋಬರ್ 15ಕ್ಕೂ ಮೊದಲು ಆರಂಭಿಸಲಾಗುವುದು ಎಂದು ಆರ್‌ಬಿಐ ತಿಳಿಸಿದೆ.




ಈ ಬಗೆಯ ಪೋರ್ಟಲ್ ಅಭಿವೃದ್ಧಿಪಡಿಸಲಾಗುವುದು ಎಂದು ಆರ್‌ಬಿಐ ಏಪ್ರಿಲ್ 6ರಂದು ತಿಳಿಸಿತ್ತು. ಯಾರೂ ಪಡೆಯದೇ ಉಳಿದಿರುವ ಠೇವಣಿಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಈ ವಿಚಾರವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆರ್‌ಬಿಐ ಕಾಲಕಾಲಕ್ಕೆ ಕಾರ್ಯಕ್ರಮ ರೂಪಿಸುತ್ತಿದೆ.

ಸಾರ್ವಜನಿಕರಿಗೆ ಈ ಪೋರ್ಟಲ್, ತಮ್ಮ ಠೇವಣಿಗಳನ್ನು ಹುಡುಕಿ ಅಲ್ಲಿರುವ ಮೊತ್ತವನ್ನು ಹಿಂದಕ್ಕೆ ಪಡೆಯಲು ಅಥವಾ ಆ ಖಾತೆಯನ್ನು ಮತ್ತೆ ಸಕ್ರಿಯಗೊಳಿಸಲು ನೆರವಾಗುತ್ತದೆ. ಯಾರೂ ಕೇಳದೆ ಉಳಿದುಕೊಂಡಿದ್ದ ರೂ.35ಸಾವಿರ ಕೋಟಿ ಮೊತ್ತವನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಫೆಬ್ರವರಿಯಲ್ಲಿ ಆರ್‌ಬಿಐಗೆ ವರ್ಗಾವಣೆ ಮಾಡಿದ್ದವು. ಎಸ್‌ಬಿಐನಲ್ಲಿ ರೂ.8,086 ಕೋಟಿ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ರೂ.5,340 ಕೋಟಿ, ಕೆನರಾ ಬ್ಯಾಂಕಿನಲ್ಲಿ ರೂ.4,558 ಕೋಟಿ ಮತ್ತು ಬ್ಯಾಂಕ್ ಆಫ್ ಬರೋಡದಲ್ಲಿ ರೂ.3,904 ಕೋಟಿ ಈ ರೀತಿ ಉಳಿದುಕೊಂಡಿತ್ತು.

...1ನೇ ಪುಟದಿಂದ

ಚರ್ಚಿಸಿ ಅವುಗಳನ್ನು ಮುಖ್ಯಮಂತ್ರಿಗಳ ಒಪ್ಪಿಗೆಯ ಮೇರೆಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತೇನೆಂದು ತಮಗೆ ಈ ಮೂಲಕ ತಿಳಿಸಲು ಬಯಸುತ್ತೇನೆ. ಈ ಸಭೆಯಲ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಷಡಕ್ಷರಿ, ಶಾಸಕರು ಹಾಗೂ ಕರ್ನಾಟಕ ಹಾಲು ಮಹಾಮಂಡಳದ ಅಧ್ಯಕ್ಷರಾದ ಎಲ್.ಬಿ.ಪಿ. ಬೀಮಾ ನಾಯ್ಕ, ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಸಹಕಾರ ಇಲಾಖೆಯ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದ್, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎಸ್. ನವೀನ್, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಮತ್ತಿತರರು ಉಪಸ್ಥಿತರಿದ್ದರು.

## ಸಮಗ್ರ ಚಳವಳಿಯ ಬಲಿಷ್ಠ ಬೆಳವಣಿಗೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಿದೆ : ಸಚಿವ ಎಚ್.ಕೆ. ಪಾಟೀಲ



ಸಭೆಯಲ್ಲಿ ಉಪಸ್ಥಿತರಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರೂ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಚ್.ಕೆ. ಪಾಟೀಲರು ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಕೃಷಿ, ಪತ್ತು, ಬ್ಯಾಂಕಿಂಗ್ ವಲಯಗಳಷ್ಟೇ ಗುಣಮಟ್ಟದಲ್ಲಿ ಬೆಳವಣಿಗೆ ಹೊಂದಿದ್ದು, ಉಳಿದಂತೆ ನೇಕಾರಿಕೆ, ಗ್ರಾಹಕ, ಕುಕ್ಕುಟ, ಮೀನುಗಾರಿಕೆ ಸೇರಿದಂತೆ ಇತರೆ ವಲಯಗಳು ಸಹ ಅಭಿವೃದ್ಧಿ ಹೊಂದುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಮಗ್ರ ಚಳವಳಿಯ ಬಲಿಷ್ಠ ಬೆಳವಣಿಗೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಿದೆ ಎಂದು ನುಡಿದರು.

ಮುಂದುವರಿದು ಮಾತನಾಡಿದ ಅವರು, ಆದಷ್ಟು ಶೀಘ್ರವಾಗಿ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆಗೂ ಹೆಚ್ಚಿನ ಒತ್ತು ನೀಡಿ, ಈ ಕುರಿತಂತೆ ಸಹಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿ, ಸಹಕಾರ ಚಳವಳಿಯ ಪರಿಣಾಮಕಾರಿ ಬೆಳವಣಿಗೆಗೆ ಪೂರಕವಾಗಿರುವ 10 ಅಂಶಗಳ ಕಾರ್ಯ ಯೋಜನೆಗಳಿಗೆ ಸಹಕಾರ ಸಚಿವರ ಸಮ್ಮುಖದಲ್ಲಿ ಚಾಲನೆ ನೀಡಲು ತಿಳಿಸಿದರು.

## ದಿನಾಂಕ : 26.08.2023ರಂದು ವಿಜಯಪುರದಲ್ಲಿ ಮಹಿಳಾ ಸಹಕಾರ ಬ್ಯಾಂಕ್ / ಮಹಿಳಾ ಆಡಳಿತ ಮಂಡಳಿ ಸದಸ್ಯರು / ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಎಲ್ಲಾ ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ಆಡಳಿತ ಮಂಡಳಿ ಸದಸ್ಯರುಗಳಿಗೆ ಹಾಗೂ ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ವಿಜಯಪುರದ "ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ" ಹರಿಯಲ್ ಗಲ್ಲಿ, ಜಾಡರ್ ಗಲ್ಲಿ, ವಿಜಯಪುರ – 586 101 ಇಲ್ಲಿ ದಿನಾಂಕ : 26.08.2023ರಂದು ಬೆಳಿಗ್ಗೆ 09.30ಕ್ಕೆ ಉಪಹಾರ ಮತ್ತು ಪ್ರತಿನಿಧಿಗಳ ನೋಂದಣಿಯೊಂದಿಗೆ ಈ ವಿಚಾರ ಸಂಕಿರಣವು ಪ್ರಾರಂಭವಾಗುತ್ತದೆ. ಈ ಕಾರ್ಯಕ್ರಮದಲ್ಲಿ ಮಾನ್ಯ ಸಹಕಾರ ಸಚಿವರು ಮತ್ತು ಮಹಾಮಂಡಳದ ಅಧ್ಯಕ್ಷರು ಮತ್ತು ರಾಜ್ಯ ಸರ್ಕಾರದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಮುಖ್ಯಸ್ಥರು ಮತ್ತು ಗಣ್ಯರುಗಳು ಭಾಗವಹಿಸಲಿದ್ದಾರೆ.

ಈ ವಿಚಾರ ಸಂಕಿರಣದಲ್ಲಿ ಕಾರ್ಪೋರೇಟ್ ಗವರ್ನನ್ಸ್, ಡಿಜಿಟಲ್ ಆ್ಯಂಡ್ ಫೈನಾನ್ಶಿಯಲ್ ಟೆಕ್ನಾಲಜಿ / ರೋಲ್ ಆಫ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ಸ್ ಆ್ಯಂಡ್ ವುಮೆನ್ಸ್ ಎಂಪವರಮೆಂಟ್ / ಬ್ಯುಸಿನೆಸ್ ಡೆವಲಪ್‌ಮೆಂಟ್ ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರು ಉಪನ್ಯಾಸ ನೀಡಲಿದ್ದಾರೆ. ಈ ವಿಚಾರ ಸಂಕಿರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಕೋರಿರುತ್ತಾರೆ.

## ಬ್ಯಾಂಕ್ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿದೆ ಎಂದ ಫಿಚ್ ರೇಟಿಂಗ್ಸ್

**ನವದೆಹಲಿ :** ಕೋವಿಡ್ ಸಾಂಕ್ರಾಮಿಕದಿಂದಾಗಿ ಎದುರಾಗಿದ್ದ ಆರ್ಥಿಕ ಅಪಾಯಗಳು ಕಡಿಮೆ ಆಗಿರುವ ಕಾರಣ, ಭಾರತದ ಬ್ಯಾಂಕ್‌ಗಳ ಕಾರ್ಯಾಚರಣೆ ಸ್ಥಿತಿಯು ಉತ್ತಮಗೊಂಡಿದೆ' ಎಂದು ಫಿಚ್ ರೇಟಿಂಗ್ಸ್ ಸಂಸ್ಥೆ ಹೇಳಿದೆ. ಕೋವಿಡ್‌ಗೂ ಮೊದಲಿನ ಸ್ಥಿತಿಗೆ ಹೋಲಿಸಿದರೆ, ಬ್ಯಾಂಕಿಂಗ್ ವಲಯದ ಆರೋಗ್ಯವನ್ನು ಹೇಳುವ ಹಲವು ಸೂಚ್ಯಂಕಗಳು ಸುಧಾರಣೆ ಕಂಡಿವೆ ಎಂದು ಅದು ಹೇಳಿದೆ. 'ದೇಶದ ಅರ್ಥವ್ಯವಸ್ಥೆಯ ಗಾತ್ರವು ಬೃಹತ್ ಆಗಿರುವುದು ಹಾಗೂ ಇಲ್ಲಿನ ಜನಸಂಖ್ಯೆಯು ಬ್ಯಾಂಕ್‌ಗಳ ಪಾಲಿಗೆ ಲಾಭದಾಯಕ ವಹಿವಾಟನ್ನು ನಡೆಸಲು, ವರಮಾನ ಮೂಲವನ್ನು ವಿಸ್ತರಿಸಿಕೊಳ್ಳಲು ಅವಕಾಶಗಳನ್ನು ಒದಗಿಸುವಂತಿವೆ ಎಂದು ಫಿಚ್ ಹೇಳಿದೆ. ಕೋವಿಡ್ ಸಾಂಕ್ರಾಮಿಕವು ಭಾರತದ ಮೇಲೆ ಕೆಟ್ಟ ಪರಿಣಾಮ ಬೀರಿತು. ಆದರೆ ಈಗ ಅದಕ್ಕೆ ಸಂಬಂಧಿಸಿದ ಅಪಾಯಗಳು ತಗ್ಗಿವೆ ಎಂದು ಫಿಚ್ ಹೇಳಿದೆ.

# ವೀರಶೈವ ಸಹಕಾರಿ ಬ್ಯಾಂಕ್ ಲಿ., ಬೆಂಗಳೂರು : 48ನೇ ವಾರ್ಷಿಕ ಸರ್ವಸದಸ್ಯರ ಸಭೆ





**ಬೆಂಗಳೂರು** : ಬೆಂಗಳೂರು ನಗರದ ವೀರಶೈವ ಸಹಕಾರಿ ಬ್ಯಾಂಕಿನ 48ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ:12.08.2023ರ ಶನಿವಾರದಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀಯುತ ಬಿ.ಎಸ್. ಪರಮಶಿವಯ್ಯ ರವರು ಕಳೆದ 3 ವರ್ಷಗಳಿಂದ ಮಹಾಮಾರಿ ಕೋರೋನ ಸಾಂಕ್ರಾಮಿಕ ರೋಗದ ಹಿನ್ನೆಲೆ ಸರ್ಕಾರದ ಆದೇಶದನ್ವಯ ವರ್ಚುವಲ್ ಸಭೆ ನಡೆಸಲಾಗಿತ್ತು.

ಈಗ ಮುಖಾಮುಖಿ ಎಲ್ಲಾ ಸದಸ್ಯರನ್ನು ಭೇಟಿಯಾಗುವ ಸುಸಂದರ್ಭ ಒದಗಿ ಬಂದಿದೆ. ಬ್ಯಾಂಕಿನ 2022–23ನೇ ಸಾಲಿನ ಆರ್ಥಿಕ ಅಂಕಿ–ಅಂಶಗಳನ್ನು ಸಭೆಯ ಮುಂದೆ ಮಂಡಿಸುತ್ತಾ, ಬ್ಯಾಂಕು FSWM (Financially Sound and Well Management) ಎಂದು ಮನ್ನಣೆ ಪಡೆದಿದೆ. ಆಡಿಟ್ ವರ್ಗೀಕರಣದಲ್ಲಿ ಈ ಹಿಂದಿನ ವರ್ಷಗಳಂತೆಯೇ ಪ್ರಸ್ತುತ ವರ್ಷವೂ "ಎ" ವರ್ಗದ ಬ್ಯಾಂಕೆಂದು ವರ್ಗೀಕರಿಸಿರುವುದು ಅತ್ಯಂತ ಸಂತೋಷ ಹಾಗೂ ಹೆಮ್ಮೆಯ ವಿಷಯ.



ಬ್ಯಾಂಕಿನಲ್ಲಿ ಸುಸ್ತಿ ಸಾಲಗಳನ್ನು ಪರಿಣಾಮಕಾರಿಯಾಗಿ ವಸೂಲು ಮಾಡುತ್ತಿರುವ ಪ್ರಯುಕ್ತ ನಿವ್ವಳ ಎನ್‌ಪಿಎ ಪ್ರಮಾಣ ಶೂನ್ಯದಲ್ಲಿದ್ದು, Gross ಎನ್‌ಪಿಎ ಪ್ರಮಾಣ ಶೇ.2.82ರಷ್ಟು ಮಾತ್ರ ಇರುತ್ತದೆ.

ಬಂಡವಾಳ ಪರ್ಯಾಪ್ತ ಅನುಪಾತ (CRAR) ಶೇ.19.70ರಷ್ಟು ಇದ್ದು ಸದರಿ ಸಾಲಿನಲ್ಲಿ ತೆರಿಗೆ ನಂತರದ ನಿವ್ವಳ ಲಾಭ ರೂ.2.61 ಕೋಟಿ ಗಳಿಸಿದ್ದು, ಸದಸ್ಯರುಗಳಿಗೆ ಶೇ.15ರಷ್ಟು ಲಾಭಾಂಶ (ಡಿವಿಡೆಂಡ್) ನೀಡಲು ಸಂತೋಷವೆನಿಸುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ 40 ಹಿರಿಯ ಸದಸ್ಯರುಗಳಿಗೆ ಸನ್ಮಾನ ಮಾಡಲಾಯಿತು. ಸಭೆಯಲ್ಲಿ ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದು ಅಪಾರ ಪ್ರಮಾಣದಲ್ಲಿ ಸದಸ್ಯರುಗಳು ಭಾಗವಹಿಸಿದ್ದರು.

# ದಿ ಟೌನ್ ಕೋ–ಆಪರೇಟಿವ ಬ್ಯಾಂಕ್ ಲಿ., ಹೊಸಕೋಟೆ : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



ಶ್ರೀ ಎ. ಅಫ್ಸರ್, ಅಧ್ಯಕ್ಷರು

**ಹೊಸಕೋಟೆ:** ದಿ ಟೌನ್ ಕೋ–ಆಪರೇಟಿವ್ ಬ್ಯಾಂಕಿನ ಹಿಂದಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ರಾಜೀನಾಮೆ ನೀಡಿದ್ದರಿಂದ ತೆರವಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ದಿನಾಂಕ : 18.08.2023ರಂದು ಜರುಗಿದ ಚುನಾವಣೆಯಲ್ಲಿ ಶ್ರೀ ಎ. ಅಫ್ಸರ್ ರವರು ಅಧ್ಯಕ್ಷರಾಗಿ ಮತ್ತು ಶ್ರೀ ಬಿ. ನಾಗರಾಜ್ ರವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ತಿಳಿಸಿರುತ್ತಾರೆ.



ಶ್ರೀ ಬಿ. ನಾಗರಾಜ್, ಉಪಾಧ್ಯಕ್ಷರು

# ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ ಲಾಭದಲ್ಲಿ ಶೇ. 120ರಷ್ಟು ಪ್ರಗತಿ



**ಬೆಂಗಳೂರು :** ನಗರದ ವಿಶ್ವಾಸಾರ್ಹ ಸಹಕಾರಿ ಬ್ಯಾಂಕುಗಳಲ್ಲಿ ಒಂದಾದ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 2022–23ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ.9.19 ಕೋಟಿಗಳ ದಾಖಲೆ ಪ್ರಮಾಣದ ನಿವ್ವಳ ಲಾಭ ಗಳಿಸಿದ್ದು, ಶೇ.120 ರಷ್ಟು ಪ್ರಗತಿ ಸಾಧಿಸಿದೆ. ಬ್ಯಾಂಕಿನ ರಜತ ಮಹೋತ್ಸವದ ಪ್ರಯುಕ್ತ ಶೇ.14 ರಷ್ಟು ಷೇರು ಲಾಭಾಂಶ ಘೋಷಿಸಲಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಸದಾಶಿವರೆಡ್ಡಿಯವರು ತಿಳಿಸಿದರು. ನಮ್ಮ ಬ್ಯಾಂಕು ರೂ.9.19 ಕೋಟಿಗಳಷ್ಟು ದಾಖಲೆ ಪ್ರಮಾಣದ ನಿವ್ವಳ ಲಾಭವನ್ನು ಗಳಿಸಲು ಸಾಧ್ಯವಾಗಿದೆ

ಅವರು 13ನೇ ತಾರೀಖಿನಂದು ಬೆಂಗಳೂರಿನಲ್ಲಿ ನಡೆದ ಬ್ಯಾಂಕಿನ ಸರ್ವಸದಸ್ಯರ ವಾರ್ಷಿಕ ಸಭೆಯನ್ನುದ್ದೇಶಿಸಿ ಮಾತನಾಡಿ ಪ್ರಸಕ್ತ ವರ್ಷದಲ್ಲಿ ಬ್ಯಾಂಕಿನ ಠೇವಣಿಗಳ ಪ್ರಮಾಣ ರೂ.383.27 ಕೋಟಿ ಮತ್ತು ಸಾಲಗಳ ಪ್ರಮಾಣ ರೂ.256.43 ಕೋಟಿಗಳಷ್ಟಿದ್ದು ಒಟ್ಟಾರೆ ವಹಿವಾಟು ರೂ.639.70 ಕೋಟಿಗಳಷ್ಟಾಗಿದೆ. ಬ್ಯಾಂಕಿನ ನಿವ್ವಳ ಎನ್.ಪಿ.ಎ ಶೂನ್ಯವಾಗಿರುವುದು ವಿಶೇಷ ಎಂದು ತಿಳಿಸಿದರು.

ಪ್ರಸ್ತುತ ಗ್ರಾಹಕರಿಗೆ ಯುಪಿಐ ಸೌಲಭ್ಯವೂ ಸಹ ಲಭ್ಯವಿದ್ದು, ಈ ವರ್ಷ ನಾಲ್ಕು ಶಾಖೆಗಳನ್ನು ತೆರೆಯಲು ಆರ್‌ಬಿಐ ಅನುಮತಿ ನೀಡಿದೆ. ಸದ್ಯ ಚಂದಾಪುರ–ಆನೇಕಲ್ ರಸ್ತೆಯಲ್ಲಿರುವ ಮರಸೂರು ಗೇಟ್ ಶಾಖೆಯನ್ನು ಶೀಘ್ರದಲ್ಲಿ ತೆರೆಯಲಾಗುವುದು ಎಂದು ಸಭೆಗೆ ತಿಳಿಸಿದರು.




**ಬೆಂಗಳೂರು :** ಶ್ರೀನಿಧಿ ಸಹಕಾರ ಬ್ಯಾಂಕು ನಗರದಲ್ಲಿ ಆಯೋಜಿಸಿದ್ದ ಸದಸ್ಯರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷ ಸದಾಶಿವರೆಡ್ಡಿ, ಉಪಾಧ್ಯಕ್ಷ ಶಂಕರ ರೆಡ್ಡಿ ಮತ್ತು ಇತರ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ಮಕ್ಕಳು ಚಿತ್ರದಲ್ಲಿದ್ದಾರೆ.

# ದುಬಾರಿ ದಂಡ : ಬ್ಯಾಂಕುಗಳಿಗೆ ನಿರ್ಬಂಧ

ಮುಂಬೈ: ಸಕಾಲದಲ್ಲಿ ಸಾಲ ತೀರಿಸದ ಗ್ರಾಹಕರ ಮೇಲೆ ದುಬಾರಿ ಬಡ್ಡಿ ಅಥವಾ ದಂಡ ಹೇರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧಿಸಿದೆ. ಈ ಸಂಬಂಧ ಶುಕ್ರವಾರ ಎಲ್ಲ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸುತ್ತೋಲೆ ಕಳುಹಿಸಲಾಗಿದೆ. 2024ರ ಜನವರಿ 1 ರಿಂದ ಜಾರಿಗೆ ಬರುವಂತೆ ಗ್ರಾಹಕರಿಗೆ ಹೆಚ್ಚಿನ ದಂಡ ವಿಧಿಸುವ, ದಂಡ ಶುಲ್ಕದ ಮೇಲೆ ಬಡ್ಡಿ ವಿಧಿಸುವ ಪರಿಪಾಠ ಬಿಟ್ಟು ಸಮಂಜಸವಾದ ಬಡ್ಡಿ ವಿಧಿಸುವಂತೆ ಆರ್‌ಬಿಐ ಕಟ್ಟಪ್ಪಣೆ ಮಾಡಿದೆ. ಗ್ರಾಹಕರ ಹಿತಾಸಕ್ತಿ ರಕ್ಷಣೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬ್ಯಾಂಕು ತಿಳಿಸಿದೆ.

ರಿಜರ್ವ್ ಬ್ಯಾಂಕಿನ ಈ ಹೊಸ ಮಾರ್ಗಸೂಚಿಯಿಂದಾಗಿ ಸಾರ್ವಜನಿಕರು ಬ್ಯಾಂಕುಗಳಿಂದ ಕಿರುಕುಳಕ್ಕೆ ಒಳಗಾಗುವುದನ್ನು ತಪ್ಪಿಸಿದಂತಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಾಲ ಮರುಪಾವತಿಸಲು ವಿಫಲವಾಗುವ ಗ್ರಾಹಕರಿಗೆ ವಿವಿಧ ಬ್ಯಾಂಕುಗಳು ಅನ್ವಯವಾಗುವ ಬಡ್ಡಿದರಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ದಂಡ ವಿಧಿಸುತ್ತಿರುವ ವಿಷಯ ರಿಸರ್ವ್ ಬ್ಯಾಂಕ್ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಹೊಸ ಸುತ್ತೋಲೆ ಹೊರಡಿಸಲಾಗಿದೆ.

ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ಸಾಲ ನೀಡುವ ಪ್ರಕ್ರಿಯೆಯಲ್ಲಿ ನ್ಯಾಯಸಮ್ಮತ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಉತ್ತೇಜಿಸುವ ಪ್ರಯತ್ನವಾಗಿ ರಿಸರ್ವ್ ಬ್ಯಾಂಕ್ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದೆ.

# ಬಸವೇಶ್ವರ ಬ್ಯಾಂಕಿನಲ್ಲಿ ಉಚಿತ ಕೌಶಲ್ಯ ತರಬೇತಿ ಶಿಬಿರದ ಸಮಾರೋಪ ಸಮಾರಂಭ



**ಬಾಗಲಕೋಟ :** ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿ., ಬಾಗಲಕೋಟ ಸಿರಿ ಸಾಂಸ್ಕೃತಿಕ ಮತ್ತು ಮಹಿಳಾ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಾಗಲಕೋಟ ಜಿಲ್ಲಾ ವನಿತಾ ಲೋಕ, ಇವರುಗಳ ಸಂಯುಕ್ತಾಶ್ರಯದಲ್ಲಿ ಕಳೆದ ಒಂದು ತಿಂಗಳಿಂದ ನಡೆಯುತ್ತಿರುವ ಉಚಿತ ಕೌಶಲ್ಯಾಭಿವೃದ್ಧಿಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಜರುಗಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಿಶು ಯೋಜನಾ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಶ್ರೀಮತಿ ಸುರೇಖಾ ಚನ್ನಿ ಇವರು ಮಹಿಳೆಯರನ್ನುದ್ದೇಶಿಸಿ ಮಾತನಾಡುತ್ತಾ ಸರಕಾರದಿಂದ ಈ ಇಲಾಖೆಯ ಅಡಿಯಲ್ಲಿ ಸಿಗುವ ಸಾಲ ಸೌಲಭ್ಯಗಳು, ವಿವಿಧ ಯೋಜನೆಗಳು ಹಾಗೂ ಅದರ ಉಪಯುಕ್ತತೆಗಳ ಬಗ್ಗೆ ಮಾಹಿತಿ ನೀಡಿದರು. ಹಾಗೆಯೇ ಕಾರ್ಯಕ್ರಮದ ಘನ ಅಧ್ಯಕ್ಷತೆವಹಿಸಿದ್ದ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಪ್ರಕಾಶ ತಪಶೆಟ್ಟಿ ಅವರು ಮಾತನಾಡುತ್ತಾ, ಕಳೆದ 6 ವರ್ಷಗಳಿಂದ ಬ್ಯಾಂಕಿನ ವತಿಯಿಂದ ನಿರಂತರವಾಗಿ ಮಹಿಳೆಯರಿಗಾಗಿ ಈ ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಉಚಿತವಾಗಿ ನೀಡುತ್ತಾ ಬಂದಿದ್ದೇವೆ. ಹಾಗೆಯೇ ಯಾರಾದರೂ ಮಹಿಳೆಯರು ಸ್ವ-ಉದ್ಯೋಗ ಮಾಡಲು ಇಚ್ಛಿಸಿದಲ್ಲಿ ಅಂತವರಿಗೆ ಬ್ಯಾಂಕಿನ ವತಿಯಿಂದ ಸಾಲ ಸೌಲಭ್ಯ ಒದಗಿಸಿ, ಅವರಿಗೆ ಸಂಪೂರ್ಣ ಸಹಾಯ ಮಾಡಲಾಗುವದು ಎಂದು ಹೇಳಿದರು. ತದನಂತರ ತರಬೇತಿ ಪಡೆದ ಎಲ್ಲ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ತದನಂತರ ವಿದ್ಯಾರ್ಥಿನಿಯರಿಂದ ವಿವಿಧ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಜರುಗಿದವು.

ವೇದಿಕೆಯಲ್ಲಿ ಬಸವೇಶ್ವರ ಬ್ಯಾಂಕಿನ ಎಲ್ಲ ನಿರ್ದೇಶಕ ಮಂಡಳಿಯವರು ಹಾಗೂ ಸಿರಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಶಿಲ್ಪಾ ಯರಾಸಿ, ಜಿಲ್ಲಾ ವನಿತಾ ಲೋಕದ ಶ್ರೀಮತಿ ಜಯಮ್ಮ ಅಬ್ಬುಲಪೂರ ಹಾಗೂ ತರಬೇತಿಯ ಶಿಕ್ಷಕಿಯರಾದ ಶ್ರೀಮತಿ ರಾಜೇಶ್ವರಿ ಬೋನಗೇರಿ, ವಿಜಯಲಕ್ಷ್ಮೀ ದಿಡ್ಡಿಬಾಗಿಲು, ರಾಜೇಶ್ವರಿ ಅಂಗಡಿ ಹಾಗೂ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿವೇಕಾನಂದ ಕೇಮಾಳಿ, ಅಭಿವೃದ್ಧಿ ಅಧಿಕಾರಿ ಮಹಾಬಳೇಶ್ವರ ಗುಡಗುಂಟಿ, ಅಧಿಕಾರಿಗಳಾದ ಎಸ್.ಬಿ. ಬದಾಮಿ, ವಿ. ಎಮ್ ಹಿರೇಮಠ ಶ್ರೀಮತಿ ಬಿ ಜಿ ಹೊನವಾಡ, ಸರೋಜ ಕುರ್ತಕೋಟಿ, ಜ್ಯೋತಿ ನಾವಲಗಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ದಿ ಗೋಕಾಕ ಅರ್ಬನ್ ಕೋ-ಆಪರೇಟಿವ ಕ್ರೆಡಿಟ್ ಬ್ಯಾಂಕ್ : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



ಶ್ರೀ ಬಿ.ಆರ್. ಕಲ್ಯಾಣಶೆಟ್ಟಿ, ಅಧ್ಯಕ್ಷರು

**ಗೋಕಾಕ :** ದಿ ಗೋಕಾಕ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕ ಲಿ.,ನ ದಿನಾಂಕ : 30.07.2023 ರಿಂದ ಮುಂದಿನ 5 ವರ್ಷಗಳ ವರೆಗಿನ ಅವಧಿಗೆ ಬ್ಯಾಂಕಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಚುನಾಯಿಸುವ ಕುರಿತು ಶ್ರೀ ಬಿ.ಕೆ. ಗೋಖಲೆ, ಚುನಾವಣಾಧಿಕಾರಿಗಳು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಇವರ ಸಭಾಧ್ಯಕ್ಷತೆಯಲ್ಲಿ ದಿನಾಂಕ : 14.08.2023 ರಂದು ಜರುಗಿದ ಪದಾಧಿಕಾರಿಗಳ ಚುನಾವಣೆಯಲ್ಲಿ ಸತತ 3ನೇ ಬಾರಿಗೆ ಶ್ರೀ ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ಶ್ರೀ ಸುಧೀರ ಬಸವಣ್ಣೆಪ್ಪಾ ಅಂಕಲಿ ಇವರನ್ನು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಎಸ್. ಪಾಟೀಲರವರು ತಿಳಿಸಿರುತ್ತಾರೆ.



ಶ್ರೀ ಎಸ್.ಬಿ. ಅಂಕಲಿ, ಉಪಾಧ್ಯಕ್ಷರು

## ನಿಮ್ಮ ಪ್ರಶ್ನೆ ನಮ್ಮ ಉತ್ತರ






ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಆಢಾವೆ ಪತ್ರಿಕೆಯನ್ನು ಸ್ವಚ್ಛಗೊಳಿಸಲು 48 ಲಾಸ್ ವರ್ಗದಲ್ಲಿರುವ ಸುಸ್ತಿ ಸಾಲಗಳನ್ನು ಮನ್ನಾ ಮಾಡಲು ಅನುಮತಿ ಕೋರಿ ರಿಜಿಸ್ಟ್ರಾರರ ಕಛೇರಿಗೆ ಪತ್ರ ಬರೆದಿದ್ದೇವು. ಭಾರತೀಯ ರಿಸರ್ವ್ ಬ್ಯಾಂಕಿನಿಂದ ಸಾಲಗಳನ್ನು ಮನ್ನಾ ಮಾಡಲು ಯಾವುದೇ ಆಕ್ಷೇಪಣೆ ಇಲ್ಲ ಎಂಬ ಪ್ರಮಾಣಪತ್ರ (ಎನ್.ಓ.ಸಿ) ಪಡೆಯುವಂತೆ ರಿಜಿಸ್ಟ್ರಾರರು ಸೂಚಿಸಿದ್ದಾರೆ. ನಾವು ರಿಜರ್ವ್ ಬ್ಯಾಂಕಿಗೆ ಎನ್.ಓ.ಸಿ ಗಾಗಿ ಅರ್ಜಿ ಹಾಕಿದ್ದೇವು. ರಿಜರ್ವ್ ಬ್ಯಾಂಕ್‌ನಿಂದ ಎನ್.ಓ.ಸಿ. ಸಿಗಲಿಲ್ಲ ಬದಲಾಗಿ, ಸುಸ್ತಿ ಸಾಲ ಲಾಸ್ ವರ್ಗದಲ್ಲಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಒಪ್ಪಿಗೆ ಪಡೆದು ಸಾಲವನ್ನು ಮನ್ನಾ ಮಾಡಬಹುದು ಎಂದು ಸೂಚಿಸಿದ್ದಾರೆ. ಒಂದು ಸುಸ್ತಿ ಸಾಲವನ್ನು "ಲಾಸ್" ಎಂದು ವರ್ಗಾಯಿಸುವುದು ಹೇಗೆ ? ಮತ್ತು ಸಾಲ ಮನ್ನಾಕ್ಕೆ ರಿಜಿಸ್ಟ್ರಾರ್‌ರಿಂದ ಒಪ್ಪಿಗೆ ಪಡೆಯುವುದು ಹೇಗೆ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಧಾರವಾಡ.**

**ಉತ್ತರ :** ಅನುಮೋದಿತ ಮೌಲ್ಯಮಾಪಕರು / ಬ್ಯಾಂಕ್ / ರಿಜರ್ವ್ ಬ್ಯಾಂಕು ಸಾಲಕ್ಕೆ ನೀಡಿದ ಭದ್ರತೆಯ ನೈಜ ಮೌಲ್ಯಮಾಪನ ಮಾಡಿದಾಗ, ಅದರ ನೈಜ ಮೌಲ್ಯ ಬಾಕಿ ಇರುವ ಸಾಲದ ಶೇ.10ರಷ್ಟಕ್ಕಿಂತ ಕಡಿಮೆ ಇದ್ದಲ್ಲಿ ಭದ್ರತೆಯ ಅಸ್ತಿತ್ವವನ್ನು ನಿರ್ಲಕ್ಷಿಸಿ ಸಾಲವನ್ನು ನಷ್ಟದ ಆಸ್ತಿ (Loss asset) ಎಂದು ನೇರವಾಗಿ ವರ್ಗೀಕರಿಸಬೇಕು. ರಿಜರ್ವ್ ಬ್ಯಾಂಕಿನ ಪತ್ರವನ್ನು ಲಗತ್ತಿಸಿ ಸಾಲಗಳನ್ನು ನಷ್ಟದ ಆಸ್ತಿಯೆಂದು ಪ್ರಮಾಣಿಸಿ ಅವುಗಳನ್ನು ಮನ್ನಾ ಮಾಡಲು ರಿಜಿಸ್ಟ್ರಾರರಿಗೆ ಅರ್ಜಿ ಹಾಕಿ. ಮನ್ನಾ ಮಾಡಲು ಮಹಾಸಭೆಯ ಒಪ್ಪಿಗೆ ಅಗತ್ಯ. ಇತ್ತೀಚೆಗೆ ರಿಜರ್ವ್ ಬ್ಯಾಂಕು ಸುಸ್ತಿಸಾಲಗಳ ತಾಂತ್ರಿಕ ಮನ್ನಾ (Technical Write-off)ಗೆ ಅನುಮತಿ ನೀಡಿರುವುದರಿಂದ ಯಾವ ಒಪ್ಪಿಗೆಗೂ ಕಾಯದೆ ಬ್ಯಾಂಕ್ ಸಾಲಗಳನ್ನು ತಾಂತ್ರಿಕ ಮನ್ನಾ ಮಾಡಿ ಆಢಾವೆ ಪತ್ರಿಕೆಯನ್ನು ಸ್ವಚ್ಛಗೊಳಿಸಬಹುದು.

**02. ನಮ್ಮ ಬ್ಯಾಂಕು ಸ್ವಸಹಾಯ ಗುಂಪು (Self Help Group) ಗಳಿಗೆ ಸಾಲ ನೀಡಬೇಕೆಂದು ಸೂಚಿಸುತ್ತಿದೆ. ಪಟ್ಟಣ ಸಹಕಾರ ಬ್ಯಾಂಕುಗಳೂ ಸ್ವಸಹಾಯ ಗುಂಪುಗಳಿಗೆ ಸಾಲ ನೀಡಬಹುದೇ? ಹೌದಾದರೆ ಸಾಲ ನೀಡಲು ಕೈಗೊಳ್ಳಬೇಕಾದ ಕ್ರಮಗಳೇನು?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ :** ಸ್ವಸಹಾಯ ಗುಂಪುಗಳು ಯಾವುದೇ ಕಾಯ್ದೆಯಡಿಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆಗಳಲ್ಲ. ನೋಂದಾಯಿಸಲ್ಪಡದ ಸಂಸ್ಥೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಸದಸ್ಯರನ್ನಾಗಿ ದಾಖಲಿಸುವಂತಿಲ್ಲ. ಸದಸ್ಯರಾಗಿರಲ್ಲದವರಿಗೆ ಪಟ್ಟಣ ಸಹಕಾರ ಬ್ಯಾಂಕುಗಳು ಸಾಲ ನೀಡುವಂತಿಲ್ಲ. ಈ ಜಂಜಾಟದಿಂದ ಹೊರಬರಲು, ಬ್ಯಾಂಕು ತನ್ನ ಉಪವಿಧಿಗೆ ತಿದ್ದುಪಡಿ ಮಾಡಿ ಸ್ವಸಹಾಯ ಗುಂಪುಗಳಿಗೆ ಸದಸ್ಯತ್ವಕ್ಕೆ ಅರ್ಹತೆ ನೀಡಿ. ಈ ತಿದ್ದುಪಡಿಗೆ ರಿಜಿಸ್ಟ್ರಾರರ ಒಪ್ಪಿಗೆ ದೊರಕಿದರೆ, ಸ್ವಸಹಾಯ ಗುಂಪುಗಳನ್ನು ಸದಸ್ಯರನ್ನಾಗಿ ಮಾಡಿ ಸಾಲ ನೀಡಬಹುದು. ಸ್ವಸಹಾಯ ಗುಂಪುಗಳಿಗೆ ಸಾಲ ನೀಡಲು ದಿನಾಂಕ : ಜುಲೈ 25, 2023ರ ರಿಜರ್ವ್ ಬ್ಯಾಂಕಿನ ಸಾಲ ನೀಡಿಕೆ ಬಗ್ಗೆ ಹೊರಡಿಸಿದ ಮಾಸ್ಟರ್ ಸುತ್ತೋಲೆಯಲ್ಲಿರುವ ಮಾರ್ಗಸೂಚಿಯನ್ನು ಅನುಸರಿಸಿ.

## ನವೆಂಬರ್ ಅಂತ್ಯಕ್ಕೆ 16ನೇ ಹಣಕಾಸು ಆಯೋಗ ರಚನೆ : ಟಿ.ವಿ. ಸೋಮನಾಥನ್



**ನವದೆಹಲಿ :** ಕೇಂದ್ರ ಸರ್ಕಾರವು 16ನೇ ಹಣಕಾಸು ಆಯೋಗವನ್ನು ನವೆಂಬರ್ ಅಂತ್ಯದ ವೇಳೆಗೆ ರಚನೆ ಮಾಡುವ ನಿರೀಕ್ಷೆ ಇದೆ ಎಂದು ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದ್ದಾರೆ.

2026ರ ಏಪ್ರಿಲ್ 1 ರಿಂದ ಐದು ಹಣಕಾಸು ವರ್ಷಗಳ ಅವಧಿಗೆ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನವನ್ನು ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಬೇಕು ಎನ್ನುವುದನ್ನೂ ಒಳಗೊಂಡು ಹಲವು ವಿಷಯಗಳಲ್ಲಿ ಶಿಫಾರಸು ನೀಡಲಿದೆ.

15ನೇ ಹಣಕಾಸು ಆಯೋಗವು 2021–22ರಿಂದ 2025–26ರವರೆಗಿನ ಐದು ಹಣಕಾಸು ವರ್ಷಗಳಿಗೆ ಸಂಬಂಧಿಸಿದ ವರದಿಯನ್ನು 2020ರ ನವೆಂಬರ್ 9ರಂದು ಸಲ್ಲಿಸಿದೆ.

2021–22ರಿಂದ 2025–26ರವರೆಗೆ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಶೇಕಡ 42ರಷ್ಟು ಪಾಲು ನೀಡುವಂತೆ ಎನ್.ಕೆ. ಸಿಂಗ್ ನೇತೃತ್ವದ 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. 14ನೇ ಆಯೋಗವು ಮಾಡಿದ್ದ ಶಿಫಾರಸಿನಲ್ಲಿಯೂ, ಇದೇ ಪ್ರಮಾಣದಲ್ಲಿ ಹಂಚಿಕೆ ಆಗಬೇಕು ಎಂದು ಹೇಳಲಾಗಿತ್ತು.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ಸಿದ್ಧಪಡಿಸಿದ್ದ ಡ್ರೋಣ್ ಯುದ್ಧ ವಿಮಾನ, ಚಿತ್ರದುರ್ಗದ ಬಳಿಯ ವಾಯುನೆಲೆಯಿಂದ ಭಾನುವಾರ ಬೆಳಗ್ಗೆ ಹಾರಾಟ ಆರಂಭಿಸಿದ ಬಳಿಕ ನಾಯಕನಹಟ್ಟಿ ಸಮೀಪದ ಕುದಾಪುರ ಬಳಿ ಪತನಗೊಂಡಿದೆ.
- ಪ್ರವಾಸಿಗರು ಪ್ರವೇಶ ಟಿಕೆಟಿಗಾಗಿ ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಹಂಪಿ ವಿಶ್ವ ಪರಂಪರೆಯ ಪ್ರದೇಶ ನಿರ್ವಹಣಾ ಪ್ರಾಧಿಕಾರ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಇತ್ತೀಚೆಗೆ ಡಿಜಿಟಲ್ ಕ್ಯೂಆರ್ ಕೋಡ್ ಟಿಕೆಟಿಂಗ್ ವ್ಯವಸ್ಥೆಯನ್ನು ಪರಿಚಯಿಸಿದೆ.
- ಅಮೆರಿಕದ ಮಿಯಾಮಿಯಿಂದ ಚಿಲಿಗೆ ಹೊರಟಿದ್ದ 271 ಪ್ರಯಾಣಿಕರನ್ನು ಹೊತ್ತ ವಿಮಾನದ ಪೈಲಟ್ ಇವಾನ್ ಆಂಡೌರ್ ಅವರು ಹಠಾತ್ತನೆ ಕುಸಿದು ಬಿದ್ದ ಹಿನ್ನೆಲೆಯಲ್ಲಿ ಸಹ ಪೈಲಟ್‌ಗಳು ತಕ್ಷಣವೇ ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಿಸಿ ಪ್ರಯಾಣಿಕರ ಜೀವ ಉಳಿಸಿದ್ದಾರೆ.
- ವಿಶ್ವದ 20ನೇ ಅತಿದೊಡ್ಡ ಮರುಭೂಮಿ ಮತ್ತು 9ನೇ ಅತಿದೊಡ್ಡ ಬಿಸಿ ಉಪೋಷ್ಣವಲಯದ 200,000 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಹರಡಿರುವ ಭಾರತದ ಥಾರ್ ಮರುಭೂಮಿ ಈ ಶತಮಾನದ ಅಂತ್ಯಕ್ಕೆ ಹವಾಮಾನ ಬದಲಾವಣೆಯಿಂದಾಗಿ ಹಸುರು ಭೂಮಿಯಾಗಿ ಪರಿವರ್ತನೆಯಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ.
- ದೇಶದಲ್ಲಿಯೇ ನಂಬರ್ ಒನ್ ಸ್ವಚ್ಛ ನಗರ ಎಂಬ ಪಟ್ಟವನ್ನು ಪಡೆದುಕೊಂಡಿರುವ ಮೈಸೂರು ಮಹಾನಗರ ಪಾಲಿಕೆ ಮೂರು ಹೊಸ ಕಸ ಸಂಗ್ರಹ ಯಂತ್ರಗಳನ್ನು ಖರೀದಿಸಿದ್ದು ಇವುಗಳ ಸಹಾಯದಿಂದ ರಾತ್ರಿ ವೇಳೆ ರಸ್ತೆಗಳ ಸ್ವಚ್ಛತಾ ಕಾರ್ಯವನ್ನು ಯಾಂತ್ರೀಕರಣಗೊಳಿಸಲು ಮುಂದಾಗಿದೆ.
- ಕಲಬುರಗಿಯ ಪ್ರಶಾಂತ ರಾಮಶೆಟ್ಟಿ ಎಂಬ ಯುವಕ ಕಳೆದ ಜೂನ್ 19ರಂದು ಶ್ರೀ ಶರಣಬಸವೇಶ್ವರ ದೇಗುಲದಿಂದ ಸೈಕಲ್‌ನಲ್ಲಿ ಚಾರ್ಧಾಮ್ ಯಾತ್ರೆ ಆರಂಭಿಸಿ, 2500ಕ್ಕೂ ಅಧಿಕ ಕಿಮೀ ಸೈಕಲ್‌ನಲ್ಲಿ ಸಾಗಿ ಕೇವಲ 45 ದಿನಗಳಲ್ಲಿಯೇ ಯಾತ್ರೆ ಮುಗಿಸಿದ್ದಾರೆ.
- ಚಂದ್ರಯಾನ ಯಾತ್ರೆಯ ಮಹತ್ವದ ಅಂತಿಮ ಹಂತದ ಡೀಬೂಸ್ಟಿಂಗ್ ಕಾರ್ಯಾಚರಣೆಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು ಆಗಸ್ಟ್ 23ರಂದು ಚಂದ್ರನ ಮೇಲ್ಮೈಯಲ್ಲಿ ನೌಕೆ ಲ್ಯಾಂಡ್ ಆಗಲಿದೆ ಎಂದು ಇಸ್ರೋ ತಿಳಿಸಿದೆ.

## ಓದುಗರ ಅನಿಸಿಕೆ...




**ತುಸು ಸಮಾಧಾನದ ವಿಷಯವಾಗಿದೆ :** ಗೃಹ ಸಾಲ ಸೇರಿದಂತೆ ಎಲ್ಲ ಸಾಲಗಳ ಬಡ್ಡಿ ದರಗಳ ಏರಿಕೆಯಿಂದ ತತ್ತರಿಸುತ್ತಿರುವ ಗ್ರಾಹಕರಿಗೆ ಸಾಲದ ವಿಷಯದಲ್ಲಿ ಯಾವುದೇ ಮಾಹಿತಿ ನೀಡದೇ ಬ್ಯಾಂಕುಗಳು ತಮ್ಮದೇ ಆದ ನಿಯಮಗಳನ್ನು ಜಾರಿಗೊಳಿಸುತ್ತಿರುವ ಪ್ರವೃತ್ತಿಗೆ ಮುಂದಿನ ದಿನಗಳಲ್ಲಿ ರಿಸರ್ವ್ ಬ್ಯಾಂಕ್ ಹೊರತರಲಿರುವ ನಿಯಮಾವಳಿಗಳಿಂದ ತೆರೆ ಬೀಳಲಿರುವುದು ತುಸು ಸಮಾಧಾನದ ವಿಷಯವಾಗಿದೆ.

▸▸ **ಗೀತಾ ಲಕ್ಷ್ಮೀಕಾಂತ್, ಚಿತ್ರದುರ್ಗ**

**ಯುಪಿಐ ಲೈಟ್ ಮತ್ತಷ್ಟು ಜನಪ್ರಿಯವಾಗಲಿದೆ :** ಇಂಟರ್‌ನೆಟ್ ಇಲ್ಲದೆಯೂ ಯುಪಿಐ ಲೈಟ್ ಮೂಲಕ ಆಫ್‌ಲೈನ್ ಕಾರ್ಯನಿರ್ವಹಣೆಯ ಮೂಲಕ ರೂ.500 ತನಕ ಹಣವನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಾವತಿ ಮಾಡಬಹುದಾದ ಅವಕಾಶವನ್ನು ಆರ್‌ಬಿಐ ಕಲ್ಪಿಸಿರುವುದು ಜನರಿಗೆ ಅನುಕೂಲವಾಗಿದೆ. ಇದರಿಂದ ಯುಪಿಐ ಲೈಟ್ ಪಾವತಿ ಮಾಡುವುದು ಮತ್ತಷ್ಟು ಹೆಚ್ಚಾಗಲಿದೆ.

▸▸ **ಅರವಿಂದ ಬಿರದಾರ, ಬಾಗಲಕೋಟೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.